# ಕರ್ನಾಟಕ ವಿಧಾನ ಪರಿಷತ್ತು

| | | |
|---|---|---|
| ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ | : | **2332** |
| ಸದಸ್ಯರ ಹೆಸರು | : | ಶ್ರೀ ಐವನ್ ಡಿ'ಸೋಜಾ (ವಿಧಾನಸಭಾ ಕ್ಷೇತ್ರದಿಂದ ಚುನಾಯಿತರಾದವರು) |
| ಉತ್ತರಿಸುವ ದಿನಾಂಕ | : | 27-03-2026 |
| ಉತ್ತರಿಸುವ ಸಚಿವರು | : | ಕೃಷಿ ಸಚಿವರು |

<table>
<tr><th>ಕ್ರ. ಸಂ</th><th>ಪ್ರಶ್ನೆ</th><th>ಉತ್ತರ</th></tr>
<tr><td>ಅ)</td><td>ಕಳೆದ 3 ವರ್ಷಗಳಿಂದ ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಬೆಳೆ ವಿಮೆ ಯೋಜನೆಯಿಂದ ಎಷ್ಟು ರೈತರು ಪ್ರಯೋಜನ ಪಡೆದುಕೊಂಡಿದ್ದಾರೆ; ತಾಲ್ಲೂಕುವಾರು ವಿವರ ನೀಡುವುದು;</td><td>

**ಕೃಷಿ ಇಲಾಖೆ:**

ಕರ್ನಾಟಕ ರೈತ ಸುರಕ್ಷಾ ಪ್ರಧಾನ ಮಂತ್ರಿ ಫಸಲ್ ಬಿಮಾ ಯೋಜನೆಯಡಿ (KRS PMFBY) 2022-23 ನೇ ಸಾಲಿನಿಂದ 2024-25ನೇ ಸಾಲಿನವರೆಗೆ ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಒಟ್ಟು 1260 ರೈತ ಪ್ರಸ್ತಾವನೆಗಳು ನೋಂದಣಿಯಾಗಿದ್ದು, ಇಲ್ಲಿಯವರೆಗೆ 369 ಅರ್ಹ ರೈತ ಫಲಾನುಭವಿಗಳ ಪ್ರಕರಣಗಳಿಗೆ ಒಟ್ಟು ರೂ.6.73 ಲಕ್ಷಗಳ ಬೆಳೆ ವಿಮೆ ಪರಿಹಾರ ಪಡೆದುಕೊಂಡಿರುತ್ತಾರೆ. ವರ್ಷವಾರು ಬೆಳೆ ವಿಮೆ ಪರಿಹಾರದ ವಿವರ ಈ ಕೆಳಕಂಡಂತಿದೆ.

<table>
<tr><th>ವರ್ಷ</th><th>ನೋಂದಣಿಯಾದ ರೈತ ಪ್ರಸ್ತಾವನೆಗಳ ಸಂಖ್ಯೆ</th><th>ಅರ್ಹ ರೈತ ಫಲಾನುಭವಿಗಳ ಪ್ರಕರಣಗಳ ಸಂಖ್ಯೆ</th><th>ಬೆಳೆ ವಿಮೆ ಪರಿಹಾರ ಮೊತ್ತ (ರೂ.ಲಕ್ಷಗಳಲ್ಲಿ)</th></tr>
<tr><td>2022-23</td><td>412</td><td>108</td><td>1.67</td></tr>
<tr><td>2023-24</td><td>352</td><td>80</td><td>1.44</td></tr>
<tr><td>2024-25</td><td>496</td><td>181</td><td>3.62</td></tr>
<tr><td>ಒಟ್ಟು</td><td>**1260**</td><td>**369**</td><td>**6.73**</td></tr>
</table>

ತಾಲ್ಲೂಕುವಾರು ವಿವರ **ಅನುಬಂಧ** ದಲ್ಲಿ ಒದಗಿಸಿದೆ.

**ತೋಟಗಾರಿಕೆ ಇಲಾಖೆ:**

ಮರುವಿನ್ಯಾಸಗೊಳಿಸಲಾದ ಹವಾಮಾನ ಆಧಾರಿತ ಬೆಳೆ ವಿಮೆ ಯೋಜನೆಯಡಿ ಕಳೆದ 3 ವರ್ಷಗಳಿಂದ ಅಂದರೆ 2022-23 ರಿಂದ 2024-25 ರವರೆಗೆ ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಬೆಳೆ ವಿಮೆ ಯೋಜನೆಯಿಂದ ಈವರೆವಿಗೆ 664628 ರೈತರು ಪ್ರಯೋಜನ ಪಡೆದುಕೊಂಡಿದ್ದಾರೆ.

</td></tr>
</table>

ತಾಲ್ಲೂಕುವಾರು ವಿವರ ಈ ಕೆಳಗಿನಂತೆ ನೀಡಲಾಗಿದೆ.

| ಕ್ರ.ಸಂ | ತಾಲ್ಲೂಕು | ವರ್ಷ/ಪ್ರಯೋಜನ ಪಡೆದುಕೊಂಡ ರೈತ ಪ್ರಕರಣಗಳು | | | ಒಟ್ಟಾರೆ |
|---|---|---|---|---|---|
| | | 2022-23 | 2023-24 | 2024-25 | |
| 1 | ಬಂಟ್ವಾಳ | 21605 | 35270 | 42386 | 99261 |
| 2 | ಬೆಳ್ತಂಗಡಿ | 21492 | 34948 | 48758 | 105198 |
| 3 | ಕಡಬ | 31279 | 48468 | 64292 | 144039 |
| 4 | ಮಂಗಳೂರು | 1139 | 1195 | 1254 | 3588 |
| 5 | ಮೂಡಬಿದ್ರೆ | 1790 | 2408 | 3832 | 8030 |
| 6 | ಮುಲ್ಕಿ | 126 | 165 | 163 | 454 |
| 7 | ಪುತ್ತೂರು | 30935 | 45081 | 64608 | 140624 |
| 8 | ಸುಳ್ಯ | 32358 | 54026 | 72025 | 158409 |
| 9 | ಉಳ್ಳಾಲ | 0 | 2505 | 2520 | 5025 |
| | | **140724** | **224066** | **299838** | **664628** |

ಆ) ಈ ಬೆಳೆ ವಿಮೆ ಯೋಜನೆ ಅನುಕೂಲ ಪಡೆಯಲು ರೈತರು ಯಾವ ರೀತಿ ನೋಂದಾಯಿಸಬೇಕು; ಅದರ ಮಾರ್ಗಸೂಚಿಗಳ ವಿವರ ನೀಡುವುದು;

**ಕೃಷಿ ಇಲಾಖೆ:**

ಕೇಂದ್ರ ಸರ್ಕಾರದ PMFBY Operational Guidelines 2023ರ ಮಾರ್ಗಸೂಚಿಯನ್ವಯ KRS PMFBY ಯೋಜನೆಯನ್ನು ರಾಜ್ಯದಲ್ಲಿ ಅನುಷ್ಠಾನಗೊಳಿಸಲಾಗುತ್ತಿದೆ.

1. ಈ ಯೋಜನೆಯಡಿ ಮುಂಗಾರು, ಹಿಂಗಾರು ಮತ್ತು ಬೇಸಿಗೆ ಹಂಗಾಮಿನಲ್ಲಿ ತಾಲ್ಲೂಕುವಾರು ಕೆಲವು ಮುಖ್ಯ ಬೆಳೆಗಳನ್ನು ಗ್ರಾಮ ಪಂಚಾಯತಿ ಮಟ್ಟಕ್ಕೆ ಹಾಗೂ ಇತರೆ ಬೆಳೆಗಳನ್ನು ಹೋಬಳಿ ಮಟ್ಟಕ್ಕೆ ಅಧಿಸೂಚಿಸಲಾಗುವುದು.
2. ಮುಂಗಾರು, ಹಿಂಗಾರು ಮತ್ತು ಬೇಸಿಗೆ ಹಂಗಾಮುಗಳಲ್ಲಿ ಅಧಿಸೂಚಿತ ಬೆಳೆಗಳಿಗೆ ರೈತರು ರೈತರ ಪಾಲಿನ ಪ್ರೀಮಿಯಂ ಮೊತ್ತವನ್ನು ಗ್ರಾಮ-ಒನ್ ಕೇಂದ್ರ (Grama-one centres)/ಸಾಮಾನ್ಯ ಸೇವಾ ಕೇಂದ್ರ (Grama-one centres)/ಸಾಮಾನ್ಯ ಸೇವಾ ಕೇಂದ್ರ (Common Service Centers)/ ಬ್ಯಾಂಕ್/ ಆರ್ಥಿಕ ಸಂಸ್ಥೆಗಳಲ್ಲಿ ಪಾವತಿಸಿ ನೋಂದಾಯಿಸಬಹುದಾಗಿರುತ್ತದೆ.
3. ಈ ಯೋಜನೆಯಡಿ ರೈತರು ಪಾವತಿಸುವ ವಿಮಾ ಕಂತಿನ ದರಗಳು ಈ ಕೆಳಕಂಡಂತಿವೆ:

   ಅ) ಆಹಾರ ಮತ್ತು ಎಣ್ಣೆಕಾಳು ಬೆಳೆಗಳಿಗೆ: ಮುಂಗಾರು ಶೇ.2.00ರಷ್ಟು ಹಿಂಗಾರು ಮತ್ತು ಬೇಸಿಗೆ ಹಂಗಾಮಿಗೆ ಶೇ.1.5ರಷ್ಟು.

   ಆ) ವಾರ್ಷಿಕ ವಾಣಿಜ್ಯ ಮತ್ತು ತೋಟಗಾರಿಕಾ ಬೆಳೆಗಳಿಗೆ: ಶೇ.5.00 ರಷ್ಟು.

| | | |
|---|---|---|
| | | ಈ ಯೋಜನೆಯಡಿ ಒಟ್ಟು ವಾಣಿಜ್ಯ ವಿಮಾ ಕಂತಿನ ದರದಲ್ಲಿ ರೈತರ ವಂತಿಗೆ ಹೊರತು ಪಡಿಸಿದ ನಂತರ ಉಳಿದ ವಿಮಾ ಕಂತಿನ ರಿಯಾಯಿತಿಯನ್ನು ರಾಜ್ಯ ಮತ್ತು ಕೇಂದ್ರ ಸರ್ಕಾರವು 50:50 ಅನುಪಾತದಲ್ಲಿ ಸಮವಾಗಿ ಭರಿಸುತ್ತವೆ.<br>4. ಎಲ್ಲಾ ಹಂಗಾಮುಗಳಲ್ಲಿ ವಿವಿಧ ವಿಮಾ ಘಟಕಗಳಲ್ಲಿ ಅಧಿಸೂಚಿಸಲಾದ ಬೆಳೆಗಳಿಗೆ ಇಚ್ಛೆಯುಳ್ಳ ಬೆಳೆ ಸಾಲ ಪಡೆದ/ಪಡೆಯದ ರೈತರು ಈ ಯೋಜನೆಯಡಿ ಭಾಗವಹಿಸಬಹುದು. ಬೆಳೆ ಸಾಲ ಪಡೆಯದ ರೈತರು ಅರ್ಜಿಯೊಂದಿಗೆ ಭೂಮಿ ಹೊಂದಿರುವುದಕ್ಕೆ ದಾಖಲೆಗಳಾದ ಪಹಣಿ/ ಬ್ಯಾಂಕ್ ಖಾತೆ ಪುಸ್ತಕ ಮತ್ತು ಆಧಾರ್ ಸಂಖ್ಯೆಯನ್ನು ನೀಡಿ ಯೋಜನೆಯಡಿ ನೋಂದಾಯಿಸುವುದು. 2023ರ ಮುಂಗಾರು ಹಂಗಾಮಿನಿಂದ ಬೆಳೆವಿಮೆ ಯೋಜನೆಯಡಿ ನೋಂದಾಯಿಸಿಕೊಳ್ಳಲು FRUITS ID ಯನ್ನು ಕಡ್ಡಾಯಗೊಳಿಸಲಾಗಿದೆ.<br>5. ಬೆಳೆಸಾಲ ಪಡೆದ ಹಾಗೂ ಬೆಳೆ ಸಾಲ ಪಡೆಯದ ರೈತರು ಬೆಳೆ ವಿಮೆಯಡಿ ಒಳಪಡುವುದು ಐಚ್ಛಿಕವಾಗಿರುತ್ತದೆ. ಬೆಳೆ ಸಾಲ ಪಡೆದ ರೈತರು ಈ ಯೋಜನೆಯಲ್ಲಿ ಭಾಗವಹಿಸಲು ಇಚ್ಛೆಯಿಲ್ಲದಿದ್ದಲ್ಲಿ, ಈ ಕುರಿತು ಬ್ಯಾಂಕಿನ ವ್ಯವಸ್ಥಾಪಕರಿಗೆ ಬೆಳೆ ನೋಂದಾಣಿ ಅಂತಿಮ ದಿನಾಂಕಕ್ಕಿಂತ 7 ದಿನಗಳು ಮುಂಚಿತವಾಗಿ ಲಿಖಿತವಾಗಿ ಮುಚ್ಚಳಿಕೆ ಪತ್ರವನ್ನು ನೀಡಿದ್ದಲ್ಲಿ, ಅಂತಹ ರೈತರನ್ನು ಬೆಳೆ ವಿಮೆ ಯೋಜನೆಯಿಂದ ಕೈಬಿಡಲಾಗುವುದು.<br>6. ರೈತರು ಯೋಜನೆಯಡಿ ಪಾಲ್ಗೊಳ್ಳಲು ಕೊನೆಯ ದಿನಾಂಕವು ಜಿಲ್ಲಾವಾರು, ಬೆಳೆವಾರು ಬೇರೆಯಾಗಿರುತ್ತದೆ. ಈ ಮಾಹಿತಿಯನ್ನು ರೈತರು ರೈತ ಸಂಪರ್ಕ ಕೇಂದ್ರಗಳಲ್ಲಿ ಹಾಗೂ ಸಂರಕ್ಷಣೆ ಪೋರ್ಟಲ್ ಮೂಲಕ ಪಡೆದುಕೊಳ್ಳಬಹುದು.<br>**ತೋಟಗಾರಿಕೆ ಇಲಾಖೆ:**<br>ಮರುವಿನ್ಯಾಸಗೊಳಿಸಲಾದ ಹವಾಮಾನ ಆಧಾರಿತ ಬೆಳೆ ವಿಮೆ ಯೋಜನೆ (RWBCIS) ಯಡಿ ಅನುಕೂಲ ಪಡೆಯಲು ರೈತರು ಬ್ಯಾಂಕ್ ಶಾಖೆಗಳು, ಪ್ರಾಥಮಿಕ ಕೃಷಿ ಪತ್ತಿನ ಸಹಕಾರ ಸಂಘಗಳು (PACS), ಕಾಮನ್ ಸರ್ವಿಸ್ ಸೆಂಟರ್ ಗಳು (CSC) ಅಥವಾ ಗ್ರಾಮ ಒನ್ ಕೇಂದ್ರಗಳಲ್ಲಿ ಸಂರಕ್ಷಣೆ ತಂತ್ರಾಂಶದ ಮೂಲಕ ನೋಂದಾಯಿಸಬಹುದು.<br>ಅದರ ಮಾರ್ಗಸೂಚಿಗಳ ವಿವರ ಈ ಕೆಳಗಿನಂತಿದೆ. |

| | | |
|---|---|---|
| | | 1. ಬೆಳೆ ವಿಮೆ ಮಾಡಲು ಆಯಾ ಜಿಲ್ಲೆಗಳಲ್ಲಿ ಅಧಿಸೂಚಿಸಲಾದ ತೋಟಗಾರಿಕೆ ಬೆಳೆಗಳಿಗೆ ಅಂತಿಮಗೊಳಿಸಲಾದ ಟರ್ಮ್ ಶೀಟ್ ರಂತೆ ರಿಸ್ಕ್ ಅವಧಿಯ ಪ್ರಾರಂಭದ ಹಿಂದಿನ ದಿನವನ್ನು ನೊಂದಣಿಗೆ ಅಂತಿಮ ದಿನಾಂಕವಾಗಿ ಪರಿಗಣಿಸಿ ಅವಕಾಶ ಕಲ್ಪಿಸಲಾಗುತ್ತದೆ.<br>2. ಈ ಯೋಜನೆ ಅಧಿಸೂಚಿತ ವಿಮಾ ಘಟಕಗಳಲ್ಲಿ (insurance unit) ಅಧಿಸೂಚಿತ ಬೆಳೆಗಳನ್ನು ಬೆಳೆದಿರುವ ರೈತರಿಗೆ ಅನ್ವಯಿಸುತ್ತದೆ.<br>3. ಸಾಲ ಪಡೆದ/ಪಡೆಯದ ರೈತರು ಸೇರಿದಂತೆ ಎಲ್ಲಾ ರೈತರಿಗೆ ಬೆಳೆ ನೋಂದಣಿ ಮಾಡಿಸಿಕೊಳ್ಳುವುದು ಸ್ವಯಂಪ್ರೇರಿತವಾಗಿರುತ್ತದೆ.<br>4. ಬ್ಯಾಂಕಿನಲ್ಲಿ ಸಾಲ ಮಂಜೂರಾದ ಎಲ್ಲಾ ರೈತರನ್ನು ಈ ಯೋಜನೆಯಡಿಯಲ್ಲಿ ಒಳಪಡಿಸಲಾಗುವುದು. ಒಂದು ವೇಳೆ ಸಾಲ ಪಡೆದ ರೈತರು ಯೋಜನೆಯಲ್ಲಿ ಭಾಗವಹಿಸಲು ಇಚ್ಛಿಸದೇ ಇದ್ದಲ್ಲಿ ನೋಂದಣಿಯ ಅಂತಿಮ ದಿನಾಂಕಕ್ಕಿಂತ ಏಳು ದಿನಗಳ ಮುಂಚಿತವಾಗಿ ಸಂಬಂಧಿತ ಬ್ಯಾಂಕ್ ಶಾಖೆಯ ವ್ಯವಸ್ಥಾಪಕರಿಗೆ ಲಿಖಿತ ಮುಚ್ಚಳಿಕೆ ಪತ್ರ ನೀಡುವ ಮೂಲಕ ಯೋಜನೆಯಿಂದ ಹೊರಗೊಳಿಯಬಹುದಾಗಿದೆ.<br>5. ಬೆಳೆ ವಿಮೆಯನ್ನು ಪ್ರತಿ ವರ್ಷ ರೈತರು ಜಿಲ್ಲೆ ಮತ್ತು ಬೆಳೆ ಅನುಗುಣವಾಗಿ ಸಾಮಾನ್ಯವಾಗಿ ಮುಂಗಾರು ಹಂಗಾಮಿಗೆ ಜುಲೈ ರಿಂದ ಆಗಸ್ಟ್ ಮಾಹೆಯವರೆಗೆ ಹಾಗೂ ಹಿಂಗಾರು ಹಂಗಾಮಿನ ಬೆಳೆಗಳಿಗೆ ಸೆಪ್ಟೆಂಬರ್ ಮಾಹೆಯಲ್ಲಿ ಮಾಡಿಸಿಕೊಳ್ಳಬಹುದಾಗಿರುತ್ತದೆ.<br>6. ಈ ಸಂಬಂಧ ಪ್ರತಿ ವರ್ಷ ಅಧಿಸೂಚನೆ ಹೊರಡಿಸಲಾಗುತ್ತದೆ.<br>7. ಹಂಗಾಮಿಗೆ ಸಂಬಂಧಿಸಿದಂತೆ ನಿಗದಿಪಡಿಸಿದ ಅಂತಿಮ ದಿನಾಂಕದೊಳಗೆ ನೋಂದಣಿ ಪೂರ್ಣಗೊಳಿಸಬೇಕು.<br>8. ನೋಂದಣಿ ಸಮಯದಲ್ಲಿ ರೈತರು ಆಧಾರ್ ಸಂಖ್ಯೆ, ಭೂ ದಾಖಲೆಗಳು, ಬೆಳೆ ವಿವರಗಳು ಮತ್ತು ಬ್ಯಾಂಕ್ ಖಾತೆ ವಿವರಗಳನ್ನು ಸಲ್ಲಿಸಬೇಕು.<br>9. ಅಧಿಸೂಚಿತ ಬೆಳೆಗಳಿಗೆ ಸಂಬಂಧಿಸಿದಂತೆ ರೈತರು ನಿಗದಿತ ಪ್ರೀಮಿಯಂ (ಶೇ.5% ರಷ್ಟು) ಪಾಲನ್ನು ಪಾವತಿಸಬೇಕು.<br><br>ನೋಂದಣಿ ಮತ್ತು ಪ್ರೀಮಿಯಂ ಪಾವತಿ ಪೂರ್ಣಗೊಂಡ ನಂತರ, ಅಧಿಸೂಚಿತ ಹವಾಮಾನ |

| | | |
|---|---|---|
| | | ಸೂಚ್ಯಂಕಗಳಲ್ಲಿ ಉಂಟಾಗುವ ವ್ಯತ್ಯಾಸಗಳ ಆಧಾರದ ಮೇಲೆ ಟರ್ಮ್ ಶೀಟ್ ರಂತೆ ಕೈಗೊಂಡ ಲೆಕ್ಕಾಚಾರದ ಆಧಾರದ ಮೇರೆಗೆ ರೈತರು RWBCIS ಅಡಿಯಲ್ಲಿ ಪರಿಹಾರ ಪಡೆಯಲು ಅರ್ಹರಾಗುತ್ತಾರೆ. |
| ಇ) | ಈ ಬೆಳೆ ವಿಮೆ ಯೋಜನೆಯನ್ನು ಪಡೆಯಲು ಸಣ್ಣ ರೈತರಿಗೆ ಮಾತ್ರ ಅವಕಾಶವಿದೆಯೇ; ಅಥವಾ ದೊಡ್ಡ ಪ್ರಮಾಣದ ರೈತರಿಗೂ ಅವಕಾಶ ಇದೆಯೇ? (ವಿವರ ನೀಡುವುದು) | **ಕೃಷಿ ಇಲಾಖೆ:**<br>ಬೆಳೆ ವಿಮೆ ಯೋಜನೆಯನ್ನು ಪಡೆಯಲು ಸಣ್ಣ ರೈತರಿಗೆ ಹಾಗೂ ದೊಡ್ಡ ಪ್ರಮಾಣದ ರೈತರಿಗೂ ಅವಕಾಶವಿರುತ್ತದೆ. ಬೆಳೆ ವಿಮೆ ಯೋಜನೆಯನ್ನು ಪಡೆಯಲು ಎಲ್ಲಾ ಹಂಗಾಮುಗಳಲ್ಲಿ ವಿವಿಧ ವಿಮಾ ಘಟಕಗಳಲ್ಲಿ ಅಧಿಸೂಚಿಸಲಾದ ಬೆಳೆಗಳನ್ನು ಬೆಳೆದು ಇಚ್ಛೆಯುಳ್ಳ ಬೆಳೆ ಸಾಲ ಪಡೆದ/ಪಡೆಯದ ರೈತರು ಭಾಗವಹಿಸಬಹುದು.<br>**ತೋಟಗಾರಿಕೆ ಇಲಾಖೆ :**<br>ಈ ಯೋಜನೆಯು ಸಣ್ಣ ಮತ್ತು ಅತಿಸಣ್ಣ ರೈತರಿಗೆ ಮಾತ್ರ ಸೀಮಿತವಾಗಿರುವುದಿಲ್ಲ. ದೊಡ್ಡ ರೈತರು ಬೆಳೆ ವಿಮೆ ಯೋಜನೆಯ ಪ್ರಯೋಜನಗಳನ್ನು ಪಡೆಯಬಹುದಾಗಿರುತ್ತದೆ. |

*ಕೃ ಇ 92 ಎಎಂಎಸ್ 2026*

(ಎನ್. ಚಲುವರಾಯಸ್ವಾಮಿ)
ಕೃಷಿ ಸಚಿವರು

## ಅನುಬಂಧ

### ಮಾನ್ಯ ವಿಧಾನ ಪರಿಷತ್ತಿನ ಸದಸ್ಯರಾದ ಶ್ರೀ ಐವನ್ ಡಿ'ಸೋಜಾ (ವಿಧಾನಸಭೆಯಿಂದ ಚುನಾಯಿತರಾದವರು) ಇವರು ಮಂಡಿಸಿರುವ ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ:2332ಕ್ಕೆ

ಕರ್ನಾಟಕ ರೈತ ಸುರಕ್ಷಾ ಪ್ರಧಾನ ಮಂತ್ರಿ ಫಸಲ್ ಬಿಮಾ ಯೋಜನೆಯಡಿ 2022-23 ನೇ ಸಾಲಿನಿಂದ 2024-25 ನೇ ಸಾಲಿನವರೆಗೆ ದಕ್ಷಿಣಕನ್ನಡ ಜಿಲ್ಲೆಯ ತಾಲ್ಲೂಕುವಾರು ಬೆಳೆ ವಿಮೆ ಪರಿಹಾರದ ವಿವರ

(ಮೊತ್ತ ರೂ. ಲಕ್ಷಗಳಲ್ಲಿ)

| ತಾಲ್ಲೂಕು | 2022-23 | | | 2023-24 | | | 2024-25 | | | ಒಟ್ಟು | | |
|---|---|---|---|---|---|---|---|---|---|---|---|---|
| | ನೋಂದಣಿಯಾದ ರೈತ ಪ್ರಸ್ತಾವನೆಗಳ ಸಂಖ್ಯೆ | ಅರ್ಹ ರೈತ ಫಲಾನುಭವಿಗಳ ಪ್ರಕರಣಗಳ ಸಂಖ್ಯೆ | ಬೆಳೆ ವಿಮೆ ಪರಿಹಾರ ಮೊತ್ತ | ನೋಂದಣಿಯಾದ ರೈತ ಪ್ರಸ್ತಾವನೆಗಳ ಸಂಖ್ಯೆ | ಅರ್ಹ ರೈತ ಫಲಾನುಭವಿಗಳ ಪ್ರಕರಣಗಳ ಸಂಖ್ಯೆ | ಬೆಳೆ ವಿಮೆ ಪರಿಹಾರ ಮೊತ್ತ | ನೋಂದಣಿಯಾದ ರೈತ ಪ್ರಸ್ತಾವನೆಗಳ ಸಂಖ್ಯೆ | ಅರ್ಹ ರೈತ ಫಲಾನುಭವಿಗಳ ಪ್ರಕರಣಗಳ ಸಂಖ್ಯೆ | ಬೆಳೆ ವಿಮೆ ಪರಿಹಾರ ಮೊತ್ತ | ನೋಂದಣಿಯಾದ ರೈತ ಪ್ರಸ್ತಾವನೆಗಳ ಸಂಖ್ಯೆ | ಅರ್ಹ ರೈತ ಫಲಾನುಭವಿಗಳ ಪ್ರಕರಣಗಳ ಸಂಖ್ಯೆ | ಬೆಳೆ ವಿಮೆ ಪರಿಹಾರ ಮೊತ್ತ |
| ಬಂಟ್ವಾಳ | 22 | 4 | 0.41 | 61 | 8 | 0.22 | 85 | 13 | 0.16 | 168 | 25 | 0.79 |
| ಬೆಳ್ತಂಗಡಿ | 71 | 9 | 0.06 | 31 | 3 | 0.04 | 51 | 1 | 0.00 | 153 | 13 | 0.10 |
| ಕಡಬ | 23 | 3 | 0.04 | 9 | 0 | 0.00 | 6 | 0 | 0.00 | 38 | 3 | 0.04 |
| ಮಂಗಳೂರು | 45 | 3 | 0.01 | 34 | 3 | 0.23 | 46 | 15 | 0.02 | 125 | 21 | 0.26 |
| ಮೂಡಬಿದರೆ | 46 | 23 | 0.72 | 37 | 27 | 0.88 | 174 | 100 | 2.23 | 257 | 150 | 3.83 |
| ಮುಲ್ಕಿ | 182 | 66 | 0.43 | 172 | 39 | 0.07 | 112 | 47 | 1.02 | 466 | 152 | 1.52 |
| ಪುತ್ತೂರು | 16 | 0 | 0.00 | 7 | 0 | 0.00 | 16 | 5 | 0.19 | 39 | 5 | 0.19 |
| ಸುಳ್ಯ | 7 | 0 | 0.00 | 1 | 0 | 0.00 | 6 | 0 | 0.00 | 14 | 0 | 0.00 |
| ಉಲ್ಲಾಳ | 0 | 0 | 0.00 | 0 | 0 | 0.00 | 0 | 0 | 0.00 | 0 | 0 | 0.00 |
| **ಒಟ್ಟು** | **412** | **108** | **1.67** | **352** | **80** | **1.44** | **496** | **181** | **3.62** | **1260** | **369** | **6.73** |